ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 14-6-2017

# ಪತ್ರಿಕಾ ಪ್ರಕಟಣೆ

**ವಿಧಾನಸಭೆಯಲ್ಲಿ ಇಂದು:**

## ಅಂತರ್ಜಲ ಅಭಿವೃದ್ಧಿಗೆ “ಕೆರೆ ಸಂಜೀವಿನಿ”

**ಬೆಂಗಳೂರು, ಜೂನ್ 14, (ಕರ್ನಾಟಕ ವಾರ್ತೆ)**

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ “ಕೆರೆ ಸಂಜೀವಿನಿ’ ಎಂಬ ಹೊಸ ಯೋಜನೆಯನ್ನು ಘೋಷಿಸಲಾಗಿದೆ. ಈ ಯೋಜನೆಯಡಿ ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲು ಇಲಾಖಾ ವತಿಯಿಂದ ಹೂಳೆತ್ತುವ ಯಂತ್ರೋಪಕರಣಗಳನ್ನು ಒದಗಿಸಿ ರೈತರು ತಮ್ಮ ಸ್ವಂತ ವೆಚ್ಚದಲ್ಲಿ ತೆಗೆದ ಹೂಳನ್ನು ತಮ್ಮ ಜಮೀನುಗಳಿಗೆ ಉಪಯೋಗಿಸಿಕೊಳ್ಳುವ ಉತ್ತಮ ಯೊಜನೆಯನ್ನು ನಮ್ಮ ಸರ್ಕಾರ ಯೋಜಿಸಲಾಗಿದೆ ಎಂದು ಕಾನೂನು, ಸಂಸದೀಯ ವ್ಯವಹಾರಗಳ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವ ಟಿ.ಬಿ. ಜಯಚಂದ್ರ ತಿಳಿಸಿದರು.

ಸದಸ್ಯ ರಘುನಾಥರಾವ್ ಮಲ್ಕಾಪೂರೆ ಅವರ ಪ್ರಶ್ನೆಗೆ ಉತ್ತರಿಸುತ್ತಾ ಸಣ್ಣ ನೀರಾವರಿ ಇಲಾಖೆಯಿಂದ ಕೆರೆಗಳ ಜೀರ್ಣೋದ್ಧಾರ, ದುರಸ್ಥಿ, ಸಮಗ್ರ ಅಭಿವೃದ್ಧಿ ಇತ್ಯಾದಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಸದನಕ್ಕೆ ತಿಳಿಸಿದರು.

**ಎಸ್‌ಎಂ:ಕೆಎನ್‌ವಿ:ಜೆಡಿ:ಜಿಪಿಆರ್.**

## ಜವಳಿ ಪಾರ್ಕ್ ಸ್ಥಾಪಿಸುವ ಉದ್ಯಮಿಗಳಿಗೆ ರಾಜ್ಯ ಸರ್ಕಾರದ ಪ್ರೋತ್ಸಾಹ ಧನ

**ಬೆಂಗಳೂರು, ಜೂನ್ 14, (ಕರ್ನಾಟಕ ವಾರ್ತೆ)**

ಜವಳಿ ಪಾರ್ಕ್ ಸ್ಥಾಪಿಸುವ ಉದ್ಯಮಿಗಳಿಗೆ ರಾಜ್ಯ ಸರ್ಕಾರದ ನೂತನ ಜವಳಿ ನೀತಿಯಡಿ ಮೂಲಭೂತ ಸೌಕರ್ಯ ಹಾಗೂ ವಿವಿಧ ರೀತಿಯ ಪ್ರೋತ್ಸಾಹ ಮತ್ತು ಉತ್ತೇಜನಗಳನ್ನು ನೀಡಲಾಗುವುದು ಎಂದು ಜವಳಿ ಹಾಗೂ ಮುಜರಾಯಿ ಸಚಿವ ರುದ್ರಪ್ಪ ಮಾನಪ್ಪ ಲಮಾಣಿ ಅವರು ತಿಳಿಸಿದರು.

ಸದಸ್ಯ ಅಮರನಾಥ ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ಬಂಡವಾಳ ಹೂಡಿಕೆಯ ಶೇಕಡ 5 ರಷ್ಟು ಉತ್ತೇಜನವನ್ನು ನೀಡಲಾಗುವುದು. ಎಸ್‌ಪಿವಿ (ಸ್ಪೆಷಲ್ ಪರ್ಪಸ್ ವೆಹಿಕಲ್) ಸ್ಥಾಪಿಸಿ ಜವಳಿ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸುವ ಕಂಪನಿಯು, ಹೂಡಿಕೆ ಮಾಡುವ ಬಂಡವಾಳದ ಮೇಲೆ ಶೇ 40 ರಷ್ಟು ಅನುದಾನವನ್ನು ನೀಡಲಾಗುತ್ತದೆ ಎಂದು ಸದನಕ್ಕೆ ತಿಳಿಸಿದರು.

ಕೇಂದ್ರ ಸರ್ಕಾರದಿಂದ ಸ್ಕೀಮ್ ಫಾರ್ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ (ಎಸ್.ಐ.ಟಿ.ಪಿ) ಯೋಜನೆಯಡಿ ಶೇಕಡ 40 ರಷ್ಟು ಅನುದಾನ ಪಡೆಯಲು ಅವಕಾಶವಿರುತ್ತದೆ. ಆದರೆ, ಈ ರೀತಿ ಕೇಂದ್ರ ಸರ್ಕಾರದಿಂದ ಅನುದಾನ ಪಡೆದಲ್ಲಿ ರಾಜ್ಯ ಸರ್ಕಾರದಿಂದ ಹೂಡಿಕೆಯ ಮೇಲೆ ಶೇ 10 ರಷ್ಟು ಅಥವಾ 10 ಕೋಟಿಗೆ ಮಿತಿಗೊಳಿಸಲಾಗುವುದು ಎಂದು ಸದಸ್ಯರಿಗೆ ತಿಳಿಸಿದರು.

**ಎಸ್‌ಎಂ:ಕೆಎನ್‌ವಿ:ಜೆಡಿ:ಜಿಪಿಆರ್.**

## ವಿಧಾನ ಪರಿಷತ್ತಿನಲ್ಲಿ ಇಂದು:

2017 ನೇ ಸಾಲಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವ ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಮತ್ತು 2017 ನೇ ಸಾಲಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ (ತಿದ್ದುಪಡಿ) ವಿಧೇಯಕಗಳನ್ನು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ವಿಧಾನಸಭೆಯಲ್ಲಿ ಇಂದು ಮಂಡಿಸಿದರು.

2017 ನೇ ಸಾಲಿನ ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕವನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಇಂದು ಸದನದಲ್ಲಿ ಮಂಡಿಸಿದರು.

ರಾಷ್ಟ್ರ ಮಟ್ಟದಲ್ಲಿ ಬೆಂಗಳೂರಿನ ಐ.ಐ.ಎಸ್.ಸಿ. ಮೊದಲ ರ‍್ಯಾಂಕ್ ಪಡೆದಿದ್ದು, ಜವಹರ್‌ಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್‌ಡ ಸೈಂಟಿಫಿಕ್ ರೀಸರ್ಚ್ ಬೆಂಗಳೂರು 11ನೇ ಸ್ಥಾನ ಗಳಿಸಿದ್ದು, ಮಣಿಪಾಲ್ ಅಕಾಡೆಮಿ 30ನೇ ಸ್ಥಾನದಲ್ಲಿದ್ದು, ಮೈಸೂರು ವಿಶ್ವ ವಿದ್ಯಾಲಯದ 57 ನೇ ಸ್ಥಾನ, ಜೆ.ಎಸ್.ಎಸ್. ವಿಶ್ವವಿದ್ಯಾಲಯ ಮೈಸೂರು 84 ನೇ ಸ್ಥಾನವನ್ನು, ಕೆ.ಎಲ್.ಇ. ಅಕಾಡೆಮಿ ಬೆಳಗಾವಿ 100 ನೇ ಸ್ಥಾನವನ್ನು ಪಡೆದಿರುತ್ತದೆ.

ಐ.ಐ.ಎಸ್.ಸಿ. ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈನ್ಸ್ ಬೆಂಗಳೂರು ಅಂತರಾಷ್ಟ್ರೀಯ ಮಟ್ಟದಲ್ಲಿ 190 ನೇ ಸ್ಥಾನದಲ್ಲಿರುತ್ತದೆ ಎಂದರು.

**ಎಸ್‌ಎಂ:ಕೆಎನ್‌ಕೆ:ಜೆಡಿ:ಜಿಪಿಆರ್.**

# ತಾತ್ಕಾಲಿಕ ಆಯ್ಕೆಪಟ್ಟಿ ಹಾಗೂ ಕಟ್ ಆಫ್ ಅಂಕ ಪ್ರಕಟ

**ಬೆಂಗಳೂರು, ಜೂನ್ 14, (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಅಯೋಗವು ಕೃಷಿ ಮಾರಾಟ ಇಲಾಖೆಯಲ್ಲಿನ ಮಾರುಕಟ್ಟೆ ಮೇಲ್ವಿಚಾರಕರ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಮತ್ತು ಸದರಿ ಹುದ್ದೆಗಳ ಕಟ್-ಆಫ್ ಅಂಕಗಳನ್ನು ಜೂನ್ 13 ರಂದು ಆಯೋಗದ ವೆಬ್‌ಸೈಟ್ www.kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಈ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಆಯ್ಕೆಪಟ್ಟಿ ಪ್ರಕಟಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಕಾರ್ಯದರ್ಶಿ, ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 1 ಇವರಿಗೆ ಸಲ್ಲಿಸಬಹುದು. ನಿಗದಿತ ದಿನಾಂಕದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

**ಎಸ್‌ಎಂ:ಜೆಡಿ:ಜಿಪಿಆರ್.**

# ಸಂದರ್ಶನ

**ಬೆಂಗಳೂರು, ಜೂನ್ 14, (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಅಯೋಗವು ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯಲ್ಲಿನ ಸಮೂಹ 'ಎ' ವೃಂದದ 25 ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಹುದ್ದೆಗಳ ನೇಮಕಾತಿಯ ಸಂದರ್ಶನಕ್ಕೆ 1:5 ರ ಅನುಪಾತದಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳ ಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

**ಎಸ್‌ಎಂ:ಜೆಡಿ:ಜಿಪಿಆರ್.**

# INTERVIEW

**Bengaluru, June 14, (Karnataka Information)**

The Commission has published the list of candidates eligible for interview in ratio of 1:5 for recruitment to 25 posts of Assistant Conservator of Forests in Karnataka State Forest Department in the Commission's webiste http://kpsc.kar.nic.in for the information of the candidates**.**

sm/jd/gpr.

# <u>ಹತ್ತು ದಿನಗಳ ಉಚಿತ ತರಬೇತಿ ಶಿಬಿರ</u>

**ಬೆಂಗಳೂರು, ಜೂನ್ 14, (ಕರ್ನಾಟಕ ವಾರ್ತೆ)**

ಮೈಸೂರು ತೋಟಗಾರಿಕಾ ಸಂಘವು ಇಕೆಬಾನ (ಜ್ಯೂನಿಯರ್) ಅಲಂಕಾರಿಕ ಕುರಿತಂತೆ ಹತ್ತು ದಿನಗಳ ಉಚಿತ ತರಬೇತಿಯನ್ನು ಹಮ್ಮಿಕೊಂಡಿದೆ. ಈ ತರಬೇತಿ ಜೂನ್ 15 ರಂದು ಮಧ್ಯಾಹ್ನ 3–00 ಗಂಟೆಗೆ ಲಾಲ್‌ಬಾಗ್‌ನ ಡಾ. ಎಂ. ಎಚ್. ಮರೀಗೌಡ ಮೆಮೋರಿಯಲ್ ಹಾಲ್‌ನಲ್ಲಿ ನಡೆಸಲಿದೆ.

ಹೆಚ್ಚಿನ ವಿವರಗಳಿಗಾಗಿ ಕಾರ್ಯದರ್ಶಿಗಳು, ಮೈಸೂರು ತೋಟಗಾರಿಕಾ ಸಂಘ, ಲಾಲ್‌ಬಾಗ್, ಬೆಂಗಳೂರು – 4 ಇವರನ್ನಾಗಲಿ ಅಥವಾ ದೂರವಾಣಿ 080 – 26576781 ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ

**ಎಸ್‌ಎಂ:ಜೆಡಿ:ಜಿಪಿಆರ್.**

# ಜೂನ್ 16 ರಿಂದ ಬೆಂಗಳೂರಿನಲ್ಲಿ ಬಂಗಾಳ ಹಾಗೂ ಕನ್ನಡ ಚಲನಚಿತ್ರೋತ್ಸವ

ಬೆಂಗಳೂರು, ಜೂನ್ 14 (ಕರ್ನಾಟಕ ವಾರ್ತೆ)

ಭಾರತದ ಖ್ಯಾತ ಚಲನಚಿತ್ರ ನಿರ್ದೇಶಕ ಸತ್ಯಜಿತ್ ರೇ ಅವರು ಸ್ಥಾಪಿಸಿರುವ ಭಾರತೀಯ ಚಲನಚಿತ್ರ ಸಂಘಗಳ ಒಕ್ಕೂಟ ಹಾಗೂ ಕರ್ನಾಟಕ ಚಲಚಿತ್ರ ಅಕಾಡೆಮಿಯು ಸಂಯುಕ್ತವಾಗಿ ಬೆಂಗಳೂರು ಹಾಗೂ ಕೋಲ್ಕತ್ತಾದಲ್ಲಿ ಕನ್ನಡ ಮತ್ತು ಬಂಗಾಳಿ ಚಲನಚಿತ್ರೋತ್ಸವವನ್ನು ಏರ್ಪಡಿಸಲಿವೆ.

ಕನ್ನಡ ಮತ್ತು ಬಂಗಾಳಿ ಸಂಸ್ಕೃತಿಯನ್ನು ಚಲನಚಿತ್ರಗಳ ಮೂಲಕ ಎರಡು ರಾಜ್ಯಗಳ ಚಲನಚಿತ್ರ ವೀಕ್ಷಕರಿಗೆ ಪರಿಚಯಿಸಲು ಈ ಚಿತ್ರೋತ್ಸವವನ್ನು ಆಯೋಜಿಸಲಾಗಿದೆ. ಬೆಂಗಳೂರಿನ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಜೂನ್ 2017 ರ 16, 17 ಮತ್ತು 18 ರಂದು ಕನ್ನಡ ಹಾಗೂ ಬಂಗಾಳಿ ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಜುಲೈ 2017 ರ 21, 22 ಹಾಗೂ 23 ರಂದು ಕೋಲ್ಕತ್ತಾದ ಪ್ರತಿಷ್ಠಿತ ನಂದನ್ ಸಂಕೀರ್ಣದಲ್ಲಿ ಕನ್ನಡ ಚಲನಚಿತ್ರೋತ್ಸವ ಜರುಗಲಿದೆ.

ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಗಳ ಸಹಕಾರದಲ್ಲಿ ಈ ಚಿತ್ರೋತ್ಸವ ನಡೆಯಲಿದ್ದು, ಪರ್ಪಲ್ ಹಾರ್ಟ್ ಸಂಸ್ಥೆ ಚಿತ್ರೋತ್ಸವವನ್ನು ನಿರ್ವಹಿಸಲಿದೆ.

ಬಂಗಾಳಿ ಖ್ಯಾತ ನಟಿ ಮಧಬಿ ಮುಖರ್ಜಿ ಚಿತ್ರೋತ್ಸವವನ್ನು ಉದ್ಘಾಟಿಸಲಿದ್ದಾರೆ. ಬಂಗಾಳಿ ನಟ ಹಾಗು ಪಶ್ಚಿಮ ಬಂಗಾಳ ಸರ್ಕಾರದ ಸಚಿವರೂ ಆಗಿರುವ ಬ್ರತ್ಯ ಬಸು, ಬಂಗಾಳಿಯ ಖ್ಯಾತ ನಿರ್ದೇಶಕರುಗಳಾದ ಶೇಖರ್ ದಾಸ್, ಸತರೂಪ ಸನ್ಯಾಲ್, ಅತನು ಘೋಷ್, ಅನಿಕೇತ್ ಚಟ್ಟೋಪಾಧ್ಯಾಯ, ಬವುಧ್ಯಾಯಾನ್ ಮುಖರ್ಜಿ, ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ, ನಾಗಾಭರಣ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಎನ್.ಆರ್.ವಿಶುಕುಮಾರ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾದ ಎಸ್.ವಿ.ರಾಜೇಂದ್ರಸಿಂಗ್‌ಬಾಬು ಮುಂತಾದವರು ಭಾಗವಹಿಸಲಿದ್ದಾರೆ.

ಜೂನ್ 16, 2017 ರಂದು ಸಂಜೆ 5.00 ಗಂಟೆಗೆ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಉದ್ಘಾಟನಾ ಸಮಾರಂಭ ಏರ್ಪಡಿಸಲಾಗಿದೆ. ಶೇಖರ್ ದಾಸ್ ನಿರ್ದೇಶನದ ಜೋಗಾಜೋಗ್ (ಬೆಂಗಾಲಿ) (2015, 2.18 ಗಂಟೆ) ಚಿತ್ರ ಪ್ರದರ್ಶನಗೊಳ್ಳಲಿದೆ.

**ಚಿತ್ರೋತ್ಸವಕ್ಕೆ ಪ್ರವೇಶ**: ಚಿತ್ರೋತ್ಸದಲ್ಲಿ ಭಾಗವಹಿಸಲು ಪಾಸ್‌ಗಳನ್ನು ವಿತರಿಸಲಾಗುವುದು. ಆಸಕ್ತರು ಪಾಸುಗಳನ್ನು ಪಡೆಯಲು ಪರ್ಪಲ್ ಹಾರ್ಟ್ ಸಂಸ್ಥೆಯ ಡಾ: ಮಧುಶ್ರೀ ಸೇನ್‌ಗುಪ್ತಾ, ಇವರನ್ನು ಮೊಬೈಲ್ ಸಂಖ್ಯೆ:9916400132 ರಲ್ಲಿ ಸಂಪರ್ಕಿಸಬಹುದು.

**ಪ್ರದರ್ಶನಗೊಳ್ಳಲಿರುವ ಚಿತ್ರಗಳು:**

| | 11.00AM | 2.00PM | 4.00 PM | 6.30 PM |
|---|---|---|---|---|
| 17-6-2017 | **ರಂಗಿತರಂಗ** ನಿರ್ದೇಶಕರು: ಅನೂಪ್ ಭಂಡಾರಿ | **ರೂಪ್‌ಕಥಾನೋಯ್** (2013, 1.51 ಗಂಟೆ), ನಿರ್ದೇಶಕರು: ಅತನು ಘೋಷ್ | **ಒನ್ಯಾ ಒಪಾಲ** (2015, 1.52 ಗಂಟೆ), ನಿರ್ದೇಶಕರು: ಸತರೂಪ ಸನ್ಯಾಲ್ | **ಅಬ್ಬಿ ಸೇನ್** ನಿರ್ದೇಶಕರು: (2015, 128 ನಿ) ಅತನು ಘೋಷ್ |
| 18-6-2017 | **ಯು ಟರ್ನ್** ನಿರ್ದೇಶಕರು: ಪವನ್ ಕುಮಾರ್ (2016,121 ನಿ) | **ನಯನ್ ಚಂಪಾರ್ ದಿನ್‌ರಾತ್ರಿ** ನಿರ್ದೇಶಕರು:ಶೇಖರ್ ದಾಸ್ (2014,105 ನಿ) | **ಶಂಕರ್ ಮುಡಿ** ನಿರ್ದೇಶಕರು: ಅನಿಕೇತ್ ಚಟ್ಟೋಪಾಧ್ಯಾಯ (2016,135ನಿ) | **ತೀನ್‌ಆಂಕೋನ್** ನಿರ್ದೇಶಕರು: ಬವುಧ್ಯಾನ್ ಮುಖರ್ಜಿ (2014,124ನಿ) |

# Bengali and Kannada Film Festival In Bengaluru

Bengaluru, June 14 (Karnataka Information)

Federation of Film Societies of India founded by renowned Indian Director Satyajit Ray and Karnataka Chalanachitra Academy is jointly organizing Bengali and Kannada Film Festival in Bengaluru and Kolkata.

The festival is organized to create an opportunity for the exchange of cultures between the two states. The festival is being held at Chamundeshwari Studios, from 16$^{th}$ to 18$^{th}$ June 2017.

Kannada Film Festival is organized from July 21$^{st}$ to 23$^{rd}$ 2017 at the prestigious Nandan Complex, Kolkata.

Department of Information and Public Relations and Department of Tourism, Government of Karnataka is collaborating the film festival along with Purple Heart institution.

The living legend Ms. Madhabi Mukherjee who embodied the immortal character of Ray's 'Charulata' will inaugurate the Film festival on 16$^{th}$ June at 5.00 pm at the Chamundeshwari Studios, Bengaluru. Opening film, **Jogajog**, directed by Sekhar Das will be screened.

Several luminaries from the Bengali and Kannada Cinema including renowned directors Girish Kasaravalli and Nagabharana, Mr. Bratya Basu, popular film actor of Bengal who is also the Cabinet Minister of the Govt. of West Bengal, Mr. S.V. Rajendra Singh Babu, Chairman, Karnataka chalanachitra Academy, N.R.Vishukumar, Director, Department of Information and Public Relations, Famous Bengali film makers like Sekhar Das, Satarupa Sanyal, Atanu Ghosh, Aniket Chattopadhyay and Bauddhyan Mukherji will take part in the festival.

Seven highly acclaimed contemporary Bengali feature films like Jogajog (2015, 2h 18m) by Sekhar Das, Rupkatha Noy (2013, 1h 51m) by Atanu Ghosh, Onya Opalaa (2015, 1h 52m) by Satarupa Sanyal, Abby Sen (2015, 2h 08m) by Atanu Ghosh, Nayanchampar Din Ratri (2014, 1h 45m) by Sekhar Das, Shankar Mudi (2016, 2h 15m) by Aniket Chattopadhyay and Teenkahon (2014, 2h 04m) by Bauddhyaan Mukherji. Kannada feature films like Rangi Taranga (2015, 2h 29m) by Anup Bhandari and U Turn (2016, 2h 01m) by Pawan Kumar will be screened.

Entry to Film Festival is only through passes. Interested persons can contact Dr. Madhushree Sengupta-996400132 for availing the passes.